# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ನಗರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-232015,
ಮೊಬೈಲ್: 9448994845
ಫ್ಯಾಕ್ಸ್: 08232-233600
ಇ-ಮೇಲ್: aee_maddur@rediffmail.com

ಕ್ರಮಾಂಕ:ಸಕಾನಿಇಂ(ವಿ)/ಕಾ&ಪಾ,ನಉವಿ/ಮದ್ದೂರು-1/2018-19/ 1295 ದಿನಾಂಕ: 7/6/2018
ಲಗತ್ತು:

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಉಪವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ:02.06.2018 ರಂದು ಜರುಗಿದ ನಗರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂದಿ | ಹುದ್ದೆ | ಕಾರ್ಯ ನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ಶ್ರೀನಿವಾಸ ಮೂರ್ತಿ | ಅ ಇಂ(ವಿ) | ವೃತ್ತ ಕಛೇರಿ, ಮಂಡ್ಯ |
| | ಶ್ರೀಮತಿ ಶ್ವೇತ ಎಂ.ಎಸ್ | ಕಾ ನಿಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 2 | ಶ್ರೀ ರವಿಶಂಕರ್ | ಕಾ ನಿಇಂ(ವಿ) | ಮದ್ದೂರು ವಿಭಾಗ |
| | ಶ್ರೀ ಜಿ.ಯು.ಮಂಜುನಾಥ್ | ಸ ಕಾಇಂ(ವಿ) | ಮದ್ದೂರು ನಗರ ಉಪವಿಭಾಗ |
| 3 | ಶ್ರೀ ಶ್ರೀಕಾಂತ್ | ಸ ಕಾಇಂ(ವಿ) | ಮದ್ದೂರು ಗ್ರಾಮೀಣ ಉಪವಿಭಾಗ |
| 4 | ಶ್ರೀ ನಾಗರಾಜು | ಪ್ರಭಾರ ಲೆಕ್ಕಾಧಿಕಾರಿ | ಮದ್ದೂರು ವಿಭಾಗ |
| 6 | ಶ್ರೀಮತಿ ಸುವರ್ಣ ಎಸ್ | ಸ ಇಂ(ವಿ) ತಾಂತ್ರಿಕ | ಮದ್ದೂರು ಉಪವಿಭಾಗ-1 |
| 7 | ಶ್ರೀ ಮಹೇಶ್ ಕುಮರ್ | ಹಿರಿಯ ಸಹಾಯಕ | ಮದ್ದೂರು ಉಪವಿಭಾಗ-1 |
| 8 | ಶ್ರೀ ಪ್ರಕಾಶ್ | ಸ ಇಂ(ವಿ) | ಪಟ್ಟಣ ಶಾಖೆ ನಗರ ಉಪವಿಭಾಗ ಮದ್ದೂರು |
| 9 | ಶ್ರೀ ಆರ್.ಪ್ರಕಾಶ್ | ಪ್ರ ಕಿಇಂ(ವಿ) | ಗೆಜ್ಜಲಗೆರೆ ಶಾಖೆನಗರ ಉಪವಿಭಾಗ ಮದ್ದೂರು |
| 10 | ಶ್ರೀ ರಾಜೇಶ್ | ಕಿ ಇಂ(ವಿ) | ಘಟಕ -2 ಕೆ.ಎಂ.ದೊಡ್ಡಿಶಾಖೆ |
| 11 | ಶ್ರೀ ಶಿವರಾಮು | ಕಿ ಇಂ(ವಿ) | ಘಟಕ -1 ಕೆ.ಎಂ.ದೊಡ್ಡಿಶಾಖೆ |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಯಿಸಿ ಉತ್ತರಿಸಲಾಯಿತು.

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು -ಶ್ರೀ ಶಿವಣ್ಣ, ಹುಲಿಗೆರೆಪುರ | |
| 1 | 2005 ರಲ್ಲಿ RUIP ಯೋಜನೆಯಡಿ ಸಂಪರ್ಕ ಕಲ್ಪಿಸಲು ಹಣ ಪಾವತಿಸಿದ್ದು ಈವರೆಗೆ ಕಾಮಗಾರಿ ಕಲ್ಪಿಸಿ ಕೊಟ್ಟಿರುವುದಿಲ್ಲ ಎಂದು ದೂರಿದರು. | ಸದರಿ ವಿಷಯದ ಬಗ್ಗೆ ಶಾಖಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಯಿತು |
| | ಗ್ರಾಹಕರು- ಶ್ರೀ ರಮೇಶ್, ಸೋಂಪುರ | |
| 2 | 63 ಕೆ.ವಿ.ಎ ಪರಿವರ್ತಕ ವಿಫಲಗೊಂಡಿದ್ದು ಬದಲಾಯಿಸಿಕೊಡಲು ಕೋರಲಾಯಿತು. | ಇಂಡೆಂಟ್ ಹಾಕಿದ್ದು, ವಿಭಾಗ ಕಚೇರಿಯಿಂದ ಪರಿವರ್ತಕವನ್ನು ನೀಡಬೇಕಾಗಿರುತ್ತದೆ ಎಂದು ಶಾಖಾಧಿಕಾರಿಗಳು ತಿಳಿಸಿದರು |
| | ಗ್ರಾಹಕರು- ಸಿದ್ದೇಗೌಡ, ಸೋಂಪುರ | |
| 3 | ರೆವಿನ್ಯೂ ಲ್ಯಾಂಡ್‌ನಲ್ಲಿ ಮನೆ ನಿರ್ಮಿಸಿದ್ದು ನಿರಂತರ ಜ್ಯೋತಿ ಯೋಜನೆಯಡಿ ಸಂಪರ್ಕ ಕಲ್ಪಿಸಲಾಗಿರುವುದಿಲ್ಲ ಎಂದು ಮನವಿ ಮಾಡಿದರು | ಇದಕ್ಕೆ ಪ್ರತಿಕ್ರಿಯಿಸಿ, ಮನೆ ಇರುವುದರಿಂದ ಪ್ರಸಕ್ತ ಐ.ಪಿ.ಯಿಮದ ಸಂಪರ್ಕ ಕಲ್ಪಿಸಿಕೊಡಲಾಗಿದ್ದು ಸ್ವಂತ ಖರ್ಚಿನಲ್ಲಿ ಕಾಮಗಾರಿ ನಿರ್ಮಿಸಿಕೊಳ್ಳಲು ಸೂಚಿಸಲಾಯಿತು. |
| | ಗ್ರಾಹಕರು- ಶ್ರೀ ಮಲ್ಲಯ್ಯ, ಹುಲಿಗೆರೆಪುರ | |
| 4 | ಅಕ್ರಮ ಸಕ್ರಮ ಯೋಜನೆಯಡಿ ಮೊತ್ತ 2016 ರಲ್ಲಿ ಪಾವತಿಸಿದ್ದು, ಈವರೆಗೆ ಕಾಮಗಾರಿ ಮಾಡಿಕೊಟ್ಟಿರುವುದಿಲ್ಲ ಎಂದು ದೂರಿದರು | ಸದರಿ ವಿಷಯದ ಬಗ್ಗೆ ಶಾಖಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಯಿತು |
| | ಗ್ರಾಹಕರು- ಶ್ರೀ ಕೃಷ್ಣಮೂರ್ತಿ, ಮದ್ದೂರು | |
| 5 | ML-10600 ರ ಬಿಲ್ಲು ಅನಿಯಮಿತವಾಗಿ ಬರುತ್ತಿರುವುದರಿಂದ ಮಾಪಕವನ್ನು ಪರಿಶೀಲಿಸಿ/ಸರಿಪಡಿಸಿ ಕೊಡಲು ಕೋರಲಾಯಿತು | ಇದಕ್ಕೆ ಪ್ರತಿಕ್ರಯಿಸಿ ಈಗಾಗಲೇ ಎಲ್.ಟಿ.ರೇಟಿಂಗ್ ರವರಿಂದ ಪರಿಶೀಲಿಸಿದ್ದು ವರದಿ ಬಂದ ನಂತರ ಕ್ರಮಕೈಗೊಳ್ಳಲು ಸೂಚಿಸಲಾಯಿತು. |
| | ಗ್ರಾಹಕರು- ಶ್ರೀ ರೇಣುಕುಮಾರ್ ಮದ್ದೂರು | |
| 6 | ಅತ್ತರಿ ಮಿಷನ್ ಗೆ ಸಂಪರ್ಕ ಪಡೆದಿದ್ದು, ನಿರಂತರ ಜ್ಯೋತಿ ಯೋಜನೆಯಡಿ ಸಂಪರ್ಕ ಕಲ್ಪಿಸಲು ಕೋರಲಾಯಿತು. | ತಮ್ಮ ಸ್ಥಾವರವು ಪುರಸಭೆ ವ್ಯಾಪ್ತಿಯಿಂದ ಹೊಗಿರುವುದರಿಂದ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಯಿತು. |
| | ಗ್ರಾಹಕರು - ಶ್ರೀ ಶಂಕರೇಗೌಡ, ವಳಗೆರೆಹಳ್ಳಿ | |
| 7 | ಐ.ಪಿ. ಫೀಡರ್‌ಗಳಿಗೆ ಬೆಳಗಿನ ವೇಳೆಯಲ್ಲಿ ಸಂಪೂರ್ಣ ವಿದ್ಯುತ್ ಸರಬರಾಜು ಮಾಡಲು ಕೋರಿದ್ದರು. ಈ ಸಂಬಂಧ ವಿತರಣಾ ಕೇಂದ್ರದ ಸಿಬ್ಬಂದಿಗಳು ಫೋನ್ ತೆಗೆಯುತ್ತಿರುವುದಿಲ್ಲ ಹಾಗು ಜಂಗಲ್ ಅಧಿಕವಾಗಿದ್ದು ತೆರವುಗೊಳಿಸಲು ತಿಳಿಸಿದರು | ಈ ಸಂಬಂಧ ಹೊಸದಾಗಿ 66/11 ಕೆ.ವಿ. ವಿತರಣಾ ಕೇಂದ್ರ ತೆರೆಯುತ್ತಿದ್ದು, ಆರಂಭವಾದ ನಂತರ ಸರಿಯಾಗುತ್ತದೆ ಎಂದು ಹಾಗು ತಾತ್ಕಾಲಿಕ ವರ್ಕ್ ಯುನಿಟ್ ಮಾಡಿದ್ದು ಜಂಗಲ್ ಕಟಿಂಗ್ ಕಾರ್ಯ ಆರಂಭಿಸಲಾಗಿದೆ ಎಂದು ತಿಳಿಸಲಾಯಿತು. |

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು - ಶ್ರೀ ಆಸಿಫ್ ಪಾಷ, ಮದ್ದೂರು | |
| 8 | ನೋಬೆಲ್ ಶಾಲೆಯಲ್ಲಿ ಕಟ್ಟಡ ಮತ್ತು ವಿದ್ಯುತ್ ತಂತಿಯ ನಿರ್ವಹಣೆಯಲ್ಲಿ ಮಗುಗೆ ಅಪಘಾತವಾಗಿದ್ದು ಈ ಬಗ್ಗೆ ಗ್ರಾಹಕರಿಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. | ತಂತಿಗೆ ಸೂಕ್ತ ರಕ್ಷಣಾ ಕವಚ ಹಾಕಿಕೊಳ್ಳಲು 7 ದಿನದ ನೋಟಿಸ್ ನೀಡಿ ಸರಿಪಡಿಸಿಕೊಳ್ಳುವುದು ತಪ್ಪಿದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಸೂಚಿಸಲಾಯಿತು. |
| | ಗ್ರಾಹಕರು - ಶ್ರೀ ಬಳ್ಳಾರಿಗೌಡ, ಅರೆಚಾಕನಹಳ್ಳಿ | |
| 9 | RUIP ಯೋಜನೆಯಡಿ ಫೆಬ್ರವರಿ-2018ರಲ್ಲಿ ಸಂಪರ್ಕ ಕಲ್ಪಿಸಲು ಹಣ ಪಾವತಿಸಿದ್ದು 17 ನೇ ಕ್ರಮ ಸಂಖ್ಯೆಗೆ ಈವರೆಗೆ ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲ ಎಂದು ದೂರಿದರು. | ಆರ್.ಕೆ.ಎಲೆಕ್ಟ್ರಿಕಲ್ಸ್ ರವರಿಗೆ ವರ್ಕ್ ಅವಾರ್ಡ್ ಆಗಿದ್ದು ಕಾಮಗಾರಿ ಪ್ರಾರಂಭಿಸಬೇಕಾಗಿರುತ್ತದೆ ಎಂದು ಶಾಖಾಧಿಕಾರಿಗಳು ತಿಳಿಸಿದರು |
| | ಗ್ರಾಹಕರು - ಶ್ರೀ ಮೋಹನ್, ಮದ್ದೂರು | |
| 10 | ಚನ್ನೇಗೌಡನದೊಡ್ಡಿ ಯಲ್ಲಿ ಪಂಪ್‌ಸೆಟ್ ಹಾಕಿಸಿದ್ದು ಸೋಲಾರ್ ಸಂಪರ್ಕ ಕಲ್ಪಿಸಿಕೊಡಲು ಕೋರಲಾಯಿತು | ಈ ಸಂಬಂಧ ಸೂರ್ಯರೈತ ಯೋಜನೆಯಡಿ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಲು ಸೂಚಿಸಲಾಯಿತು. |
| | ಗ್ರಾಹಕರು - ಶ್ರೀ ಕುಮಾರ ಸ್ವಾಮಿ, ನಿಡಗಟ್ಟ | |
| 11 | ನಿಡಗಟ್ಟ ಗ್ರಾಮದಲ್ಲಿ ಅಧಿಕ ವಿದ್ಯುತ್ ಅಡಚಣೆಯಾಗುತ್ತಿದ್ದು ಸರಿಪಡಿಸಲು ತಿಳಿಸಿದರು | ಸದರಿ ವಿಷಯದ ಬಗ್ಗೆ ಶಾಖಾಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ತಿಳಿಸಿದರು |
| | ಗ್ರಾಹಕರು - ಶ್ರೀ ಗೋಪಾಲ್ ಡಿ.ಎ.ಕೆರೆ | |
| 12 | 2014 ನೇ ಸಾಲಿನಲ್ಲಿ RUIP ಗೆ ಮೊತ್ತ ಪಾವತಿಸಿದ್ದು ಅಂದಾಜು ಪಟ್ಟಿ ತಯಾರಿಸಲಾಗಿದೆ. ಆದರೆ ಪಕ್ಕದ ಜಮೀನಿನ ಮಾಲಿಕರು ತಡೆಯೊಡ್ಡಿದ್ದರಿಂದ ಬೇರೆ ಕಡೆಯಿಂದ ಮತ್ತೊಂದು ಅಂದಾಜು ಪಟ್ಟಿ ತಯಾರಿಸಿದ್ದು ಕಾಮಗಾರಿ ಮಾಡಿಕೊಡಲು ಕೋರಲಾಗಿದೆ | ಅಂದಾಜು ಪಟ್ಟಿ ವಿಭಾಗೀಯ ಕಚೇರಿಗೆ ಸಲ್ಲಿಕೆಯಾಗಿದ್ದು, ವರ್ಕ್ ಅವಾರ್ಡ್ ನೀಡಬೇಕಾಗಿರುತ್ತದೆ ಎಂದು ಶಾಖಾಧಿಕಾರಿಗಳು ತಿಳಿಸಿದರು |
| | ಗ್ರಾಹಕರು - ಪ್ರಭುಸ್ವಾಮಿ ಚಾಮನಹಳ್ಳಿ | |
| 13 | 2016 ನೇ ಸಾಲಿನಲ್ಲಿ RUIP ಯೋಜನೆಯಡಿ ಮೊತ್ತ ಪಾವತಿಸಿದ್ದು ಪ್ರತ್ಯೇಕವಾಗಿ ಸಂಪರ್ಕ ಕಲ್ಪಿಸಲು ಕೋರಲಾಯಿತು | ಈ ಸಂಬಂಧ ವಿಶೇಷವಾಗಿ ಪಕ್ಕದಲ್ಲಿ ಬೇರೆಯಾರು ಇಲ್ಲದಿರುವುದರಿಂದ ಮಾಡಿಕೊಡುವುದಾಗಿ ತಿಳಿಸಲಾಯಿತು |

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು – ಶ್ರೀ ರಘುನಂದನ್ ಉಪ್ಪಿನಕೆರೆ | |
| 14 | ಲೈನ್‌ಗಳಿಗೆ ಮರಗಳಿಗೆ ತಾಗುತ್ತಿದ್ದು ಮರಗಳನ್ನು ತೆರವುಗೊಳಿಸಲು ತಂತಿ ಬಿಚ್ಚಿಕೊಳ್ಳಲು ಕೋರಲಾಯಿತು | 1.ಇದಕ್ಕೆ ಪ್ರತಿಕ್ರಿಯಿಸಿ ಸ್ವಂತ ಮರಗಳಾಗಿದ್ದರೆ ಅರ್ಜಿ ನೀಡಿದ ನಂತರ ತಂತಿ ಬಿಚ್ಚಿಕೊಡಲಾಗುವುದು ಎಂದು ತಿಳಿಸಲಾಯಿತು.<br>2.ಮುಂದುವರೆದು ದೂರು ದಾಖಲಾದ ಪ್ರತ್ಯೇಕ ರಿಜಿಸ್ಟರ್ ಇಟ್ಟು ದೂರನ್ನು ಪರಿಹರಿಸುವ ಬಗ್ಗೆ ತೆಗೆದುಕೊಂಡ ಕ್ರಮ ಮತ್ತು ಪೂರ್ಣಗೊಳಿಸಿರುವ ದಿನಾಂಕದೊಂದಿಗೆ ವಿವರವನ್ನು ರಿಜಿಸ್ಟರ್‌ನಲ್ಲಿ ನಮೂದಿಸಲು ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ನಿರ್ದೇಶಿಸಿದರು |
| | ಗ್ರಾಹಕರು – ಶ್ರೀ ಶಂಕರ್ ಮಾದನಾಯಕನಹಳ್ಳಿ | |
| 15 | ಕೊಳವೆ ಬಾವಿಗೆ ಸೂರ್ಯರೈತ ಯೋಜನೆಯಡಿ ಹಾಕಿಸಿಕೊಡಲು ಕೋರಿದರು | ಈ ಸಂಬಂಧ ಜನರಲ್ ಕೆಟಗರಿಯಾಗಿದ್ದರೆ ರೂ.1,00,000/- ಪಾವತಿಸಬೇಕಾಗಿದ್ದು, SC/ST ಆಗಿದ್ದರೆ ರೂ.50/- ಮಾತ್ರ ನೋಂದಣಿ ಶುಲ್ಕ ಪಾವತಿಸಬೇಕಾಗಿರುತ್ತದೆ. ಪ್ರಸಕ್ತ SC/ST ವರ್ಗದವು ಮುಗಿದಿರುತ್ತದೆ ಎಂದು ತಿಳಿಸಲಾಯಿತು |
| | ಗ್ರಾಹಕರು – ಶ್ರೀ ಶಿವಣ್ಣ ಸಾದೊಳಲು | |
| 16 | ಹೆಚ್ಚುವರಿ ಪರಿವರ್ತಕ ಅಳವಡಿಸಿದ್ದು ಚಾಲನೆ ಗೊಂಡಿರುವುದಿಲ್ಲ ಮತ್ತು ಅನಧಿಕೃತವಾಗಿ ಸಂಪರ್ಕವನ್ನು ಐ.ಪಿ.ಗ್ರಾಹಕರು ಹಾಕಿಕೊಂಡಿರುತ್ತಾರೆ. | ಇದಕ್ಕೆ ಪ್ರತಿಕ್ರಿಯಿಸಿ ಈಗಾಗಲೇ ಚಾಲನೆ ಮಾಡಿದ್ದ ಮಲ್ಲೇಶ್ ಹಾಗು ಲಲಿತಮ್ಮ ಎಂಬುವರ ಐ.ಪಿ.ಗೆ ಸಂಪರ್ಕ ಕಲ್ಪಿಸಲು ಪರಿವರ್ತಕ ಅಳವಡಿಸಿದ್ದು ಸದರಿಯವರು ಬಳಕೆ ಮಾಡುತ್ತಿರುತ್ತಾರೆ. |
| | ಗ್ರಾಹಕರು – | |
| 17 | ಸೌಭಾಗ್ಯ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸುವ ಅರ್ಜಿ ಸಲ್ಲಿಸುವ ಅವಧಿಯು ಕೊನೆಗೊಂಡಿದ್ದು, ಅವಧಿ ವಿಸ್ತರಣೆ ಮಾಡಬೇಕೆಂದು ಕೋರಲಾಯಿತು | ಈ ಯೋಜನೆಯು ದಿ:31.3.2018 ರವರೆಗೆ ಅರ್ಜಿಯನ್ನು ಸ್ವೀಕರಿಸಲು ಆದೇಶವಾಗಿತ್ತು. ಮೇಲಧಿಕಾರಿಗಳಿಂದ ವಿಸ್ತರಣೆ ಆದೇಶ ನೀಡಿರುವುದಿಲ್ಲ ಎಂದು ತಿಳಿಸಿದರು. |
| | ಗ್ರಾಹಕರು – | |
| 18 | ಆರ್.ಕೆ. ಇಂಜಿನಿಯರ್ ರವರು ನ.ಲಿ.ಕೃಷ್ಣ ರವರಿಂದ RUIP ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ರೈತರುಗಳಿಂದ ಹಣ ಪಡೆಯುತ್ತಿರುವುದಾಗಿ ತಿಳಿಸಿರುತ್ತಾರೆ | ಸದರಿ ವಿಷಯದ ಬಗ್ಗೆ ಆರ್.ಕೆ. ಇಂಜಿನಿಯರ್ಸ್ ರವರ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ತಿಳಿಸಿದರು |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 1.30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ನಗರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಮು.ಕ